# ಬೆಂಕಿ ಬಂಡೆ..!





ಪ್ರಕೃತಿ ಹಲವಾರು ವಿಸ್ಮಯಗಳನ್ನು ತನ್ನೊಡಲಲ್ಲಿ ಬಚ್ಚಿರಿಸಿಕೊಂಡಿರುತ್ತದೆ. ಇಂತಹ ಅಚ್ಚರಿಗಳಿಗೆ ಕೆಲವೊಮ್ಮೆ ಕಾರಣ ತಿಳಿಯುತ್ತದೆಯಾದರೂ ಹಲವು ಬಾರಿ ನಿಗೂಢವಾಗಿರುತ್ತದೆ.

ಟರ್ಕಿ ದೇಶದ ನೈರುತ್ಯ ದಿಕ್ಕಿನ ಸಿರಾಲಿ ನಗರದ ಬಳಿಯ ಅಂಟಾಲ್ಯೆ ನಿಂದ ಸುಮಾರು 80 ಕಿಲೋಮೀಟರ್ ದೂರದಲ್ಲಿ ಕಿಮರಾ(ಸಿಂಹದ ತಲೆ,ಆಡಿನ ದೇಹ ಹಾಗೂ ಹಾವಿನ ಬಾಲವುಳ್ಳ ಕಾಲ್ಪನಿಕ ಪ್ರಾಣಿ) ಹೆಸರಿನ ಗುಡ್ಡ ಇದೆ. ಈ ಗುಡ್ಡದ ಬಳಿಯಲ್ಲಿನ ಕೆಲವು ಬಂಡೆಗಳಲ್ಲಿ ಸಾವಿರಾರು ವರ್ಷಗಳಿಂದ ಬೆಂಕಿಯ ಜ್ವಾಲೆ ಉರಿಯುತ್ತಿದೆ. ಇದರ ಕೆಳಭಾಗದಲ್ಲಿ ಹಿಫೈಸ್ಟೋಸ್(ದೇವರುಗಳ ಚಿನಿವಾರ ಎನ್ನಲಾಗುವ ಗ್ರೀಕ್ ದೇವತೆ) ದೇವರ ಪಾಳು ದೇವಾಲಯದ  ಅವಶೇಷಗಳಿವೆ. ಸುಮಾರು 12 ಕಡೆ ಇಂಥಹ ಬೆಂಕಿ ಜ್ವಾಲೆಗಳನ್ನು ನೋಡಬಹುದು.

ಬಂಡೆಗಳ ಕಿಂಡಿಗಳಿಂದ ಹೊರಸೂಸುವ ಮಿಥೇನ್ ಅನಿಲನಿಂದ ಇಲ್ಲಿ ಬೆಂಕಿ ಉರಿಯುತ್ತಿದೆ. ಈ ಬೆಂಕಿಗೆ ಟರ್ಕಿ ಭಾಷೆಯಲ್ಲಿ ಯುನಾರ್ಟಸ್ ಎಂದು ಕರೆಯುತ್ತಾರೆ. ಇದು ಸುಮಾರು 2500 ವರ್ಷಗಳಿಂದಲೂ ನಿರಂತರವಾಗಿ ಉರಿಯುತ್ತಿರಬಹುದೆಂದು ಭಾವಿಸಲಾಗಿದೆ. ಇದುವರೆಗೂ ಭೂಭಾಗದಲ್ಲಿ ಪ್ರಕೃತಿದತ್ತವಾಗಿ ಸಿಗುವ ಸಿಗುವ ಅತಿದೊಡ್ಡ ಮಿಥೇನ್ ಹೊರಸೂಸುವಿಕೆ ಇದಾಗಿದೆ.

ಋತುಮಾನಕ್ಕೆ ಅನುಗುಣವಾಗಿ ಅನಿಲ ಹೊರಸೂಸುವಿಕೆಯ ಪ್ರಮಾಣ ಬದಲಾಗುತ್ತಿರುತ್ತದೆ ಮತ್ತು ಚಳಿಗಾಲದಲ್ಲಿ ಬೆಂಕಿ ಜ್ವಾಲೆಯ ಪ್ರಖರತೆ ಹೆಚ್ಚು ತೀವ್ರವಾಗಿರುತ್ತದೆ. ಈ ಉರಿಯುತ್ತಿರುವ ಜ್ವಾಲೆಯನ್ನು ಹಾಗೂ ದೇವಾಲಯದ ಅವಶೇಷವನ್ನು ನೋಡಲೆಂದೇ ಸಾವಿರಾರು ಯಾತ್ರಿಕರು ಈ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಕತ್ತಲಲ್ಲಿ ಬೆಂಕಿ ಜ್ವಲಿಸುವಿಕೆಯು ನಿಚ್ಚಳವಾಗಿ ಕಾಣುವುದರಿಂದ ರಾತ್ರಿ ವೇಳೆಯಲ್ಲಿಯೇ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ.  ನೂರಾರು ವರ್ಷಗಳ ಹಿಂದೆ, ನಾವಿಕರು ಈ ಜ್ವಾಲೆಯನ್ನು ನೋಡಿಯೇ ದಿಕ್ಕನ್ನು ತಿಳಿಯುತ್ತಿದ್ದರಂತೆ. ಆದರೆ ಈಗ ಯಾತ್ರಿಕರು ಚಹಾ ಕಾಯಿಸಲು ಮಾತ್ರ ಇದನ್ನು ಉಪಯೋಗಿಸಿಕೊಳ್ಳುತ್ತಾರೆ.

**■ ವಿದ್ಯಾ ವಿ. ಹಾಲಭಾವಿ**

